**F.Y.**
**March 2018**

**Reg. No. ....................................**

**Name ..........................................**

**106**

## Part - II

## KANNADA

Maximum : 80 Scores

Time : **2½** Hours

Cool off time : **15** Minutes

***General Instructions to Candidates :***

- There is a 'Cool off time' of 15 minutes in addition to the writing time.
- Use the 'Cool off time' to get familiar with questions and to plan your answers.
- Read the instructions carefully.
- Read the questions carefully before answering.
- Calculations, figures and graphs should be shown in the answer sheet itself.
- Give equations wherever necessary.
- Electronic devices except nonprogrammable calculators are not allowed in the Examination Hall.

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಉತ್ತರವನ್ನು ಆವರಣದಿಂದ ಆಯ್ದು ಬರೆಯಿರಿ.** **(4 × 1 = 4)**

**1.** 'ಕೂಡಲ ಸಂಗಮದೇವ' ಈ ಅಂಕಿತದಲ್ಲಿ ವಚನರಚನೆ ಮಾಡಿದವರು.

(ಅಕ್ಕಮಹಾದೇವಿ, ಸಿದ್ಧರಾಮ, ಆಯ್ದಕ್ಕಿ ಲಕ್ಕಮ್ಮ, ಬಸವಣ್ಣ)

**2.** ವೀರಶೈವರ ನೋಯಿಸೆನು ರಾಜೀವ ಸಖನಾಣೆ – ಇಲ್ಲಿ 'ರಾಜೀವಸಖ' ಎಂದು ಯಾರನ್ನು ಹೇಳಲಾಗಿದೆ?

(ಚಂದ್ರ, ಸೂರ್ಯ, ಅರ್ಜುನ, ಕರ್ಣ)

**3.** ಕೆಳಗೆ ಕೊಟ್ಟಿರುವವುಗಳಲ್ಲಿ ಅನ್ಯಭಾಷಾಪದವನ್ನು ಗುರುತಿಸಿರಿ.

(ಆಹಾರ, ಬಯಲು, ನೋಟೀಸು, ನೆಲ)

**4.** 'ಮಲ್ಲಿಗೆಯಾಗು' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

(ಲೋಪ, ಆಗಮ, ಆದೇಶ, ಗುಣ)

**5 ರಿಂದ 10 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ :** **(6 × 1 = 6)**

**5.** ದೃಷ್ಟಿ, ಶೃಂಗಾರ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ.

**6.** ಧರೆ – ಇದರ ಎರಡು ಪರ್ಯಾಯಪದಗಳನ್ನು ಬರೆಯಿರಿ.

**7.** 'ಭುವನದೊಳಗೆನಗಾಪ್ತ' ಈ ಪದವನ್ನು ವಿಂಗಡಿಸಿ ಬರೆಯಿರಿ.

**8.** ಚಾಣಕ್ಯನು ಬುದ್ಧಿವಂತನಾದ ಮಂತ್ರಿಯಾಗಿದ್ದನು. ಅಡಿಗೆರೆಯೆಳೆದ ಪದವು ತದ್ಧಿತಾಂತ ಪದವಾಗಿದೆ. ಇದೇ ರೀತಿಯ ಬೇರೆ ಎರಡು ಪದಗಳನ್ನು ಬರೆಯಿರಿ.

**9.** ವ್ಯವಸ್ಥೆ, ದಯೆ – ಇವುಗಳ ವಿರೋಧಾರ್ಥ ಪದವನ್ನು ಬರೆಯಿರಿ.

**10.** ಕೆಳಗೆ ಕೊಟ್ಟಿರುವ ವಾಕ್ಯವನ್ನು ಎರಡು ಸರಳವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.

ಈ ವರ್ಷ ಚೆನ್ನಾಗಿ ಮಳೆ ಲಭಿಸಿದುದರಿಂದ ಭತ್ತದ ಗದ್ದೆಗಳಲ್ಲಿ ಉತ್ತಮ ಫಸಲು ಬಂದಿದೆ.

**11.** ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅನೇಕ ವೈದಕೀಯ ಶಿಕ್ಷಣ ಸಂಸ್ಥೆಗಳಿವೆ. ಕೇರಳವು ಶೈಕ್ಷಣಿಕವಾಗಿ ಮುಂದುವರಿದ ರಾಜ್ಯವಾಗಿದೆ.

ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದದ ಪ್ರಯೋಗವನ್ನು ತಿಳಿದುಕೊಂಡು 'ವಿಜ್ಞಾನ' ಎಂಬ ಪದವನ್ನು ಮತ್ತು ಅದರ ಭಾವನಾಮರೂಪವನ್ನು ಬಳಸಿಕೊಂಡು ವಾಕ್ಯರಚನೆ ಮಾಡಿರಿ. **(2)**

**12.** 'ಶಾಭಾಷ್! ಮನುಷ್ಯರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ'– 'ಬಕ' ನಾಟಕದಲ್ಲಿ ಬರುವ ಈ ಮಾತಿನ ಸಂದರ್ಭವನ್ನು ವಿವರಿಸಿ ಬರೆಯಿರಿ. **(3)**

**13.** ಕುಂಬಳಕಾಯಿಯ ಕುರಿತಾದ ನಂಬಿಕೆಯಿಂದಾಗಿ ಲೇಖಕರ ಬಂಧುವೊಬ್ಬರು ಪೇಚಿಗೆ ಸಿಲುಕಿದ ಸನ್ನಿವೇಶ 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠಭಾಗದಲ್ಲಿದೆ. ಅದರ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ. **(3)**

**14 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** **(4 × 4 = 16)**

**14.** 'ಪ್ರತಿನಾಯಕ ಪಾತ್ರಗಳು ಶೇಣಿಯವರ ಕೈಯಲ್ಲಿ ಹೊಸ ಜೀವಂತಿಕೆಯನ್ನು ಪಡೆಯುತ್ತಿದ್ದವು' ಈ ಹೇಳಿಕೆಯನ್ನು ಪಾಠಭಾಗದಲ್ಲಿ ಬಂದಿರುವ ಯಾವುದಾದರೂ ಎರಡು ಉದಾಹರಣೆಗಳಿಂದ ಸಮರ್ಥಿಸಿ ಬರೆಯಿರಿ.

**15.** ಕೆಳಗೆ ಕೊಟ್ಟಿರುವ ಮಂಕುತಿಮ್ಮನ ಕಗ್ಗದ ಸಾಲುಗಳ ಆಶಯವನ್ನು ಬರೆಯಿರಿ.

ಹುಳು ಹುಟ್ಟಿ ಸಾಯುತಿರೆ, ನೆಲಸವೆದು ಕರಗುತಿರೆ<br>
ಕಡಲೊಳೆತ್ತಲೋ ಹೊಸದ್ವೀಪವೇಳುವುದು<br>
ಕಳೆಯುತೊಂದಿರಲಲ್ಲಿ, ಬೆಳೆವುದಿನ್ನೊಂದೆಲ್ಲೋ<br>
ಅಳಿವಿಲ್ಲ ವಿಶ್ವಕ್ಕೆ – ಮಂಕುತಿಮ್ಮ

**16.** 'ಮನೋರಂಜನೆಗಾಗಿ ದೈವಗಳನ್ನು ಕಟ್ಟಿ ಆಡಿಸುವ ಕ್ರಮವಿಲ್ಲ' ಈ ಮಾತಿನ ಔಚಿತ್ಯವನ್ನು 'ಭೂತಾರಾಧನೆ ಮತ್ತು ತೆಯ್ಯಂ' ಪಾಠದ ಆಧಾರದಲ್ಲಿ ವಿವರಿಸಿರಿ.

**17.** ಕೆಳಗೆ ಕೊಟ್ಟಿರುವ ಪದ್ಯಸಾಲುಗಳಿಗೆ ಪ್ರಸ್ತಾರಹಾಕಿ, ಗಣವಿಭಜನೆ ಮಾಡಿ ಛಂದಸ್ಸನ್ನು ಹೆಸರಿಸಿರಿ

ಹರಿಯ ಹಗೆ ಹೊಗೆದೋರದುರುಹದೆ<br>
ಬರಿದೆ ಹೋಹುದೆ ತನ್ನ ವಂಶವ<br>
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**18.** 'ಜೂಜಿಗೆ ಮನವ ಬಿಡದಿರು' ಎಂದು ತನ್ನ ಕಂದನಿಗೆ ಉಪದೇಶಿಸುತ್ತಾ ತಾಯಿ ನೆನಪಿಸಿಕೊಡುವ ಪುರಾಣದ ಎರಡು ಸನ್ನಿವೇಶಗಳು ಯಾವುವು? ಸಂಕ್ಷಿಪ್ತವಾಗಿ ವಿವರಿಸಿರಿ.

**19 ರಿಂದ 26 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರನ್ನು ಉತ್ತರಿಸಿರಿ.** **(6 × 5 = 30)**

**19.** 'ಯಾರೋ ಕಲಾವಿದ ಮೀನುಗಳನ್ನೆಲ್ಲ ಹಿಡಿದು ಕೂರಿಸಿಕೊಂಡು ತನ್ನ ಹುಚ್ಚು ಕಲ್ಪನೆಯಲ್ಲಿ ಬಣ್ಣ ಬಳಿದು 'ಹೋಗಿ ಆಟವಾಡಿ ಬನ್ನಿ' ಎಂದು ಕಳುಹಿಸುತ್ತಿರಬಹುದು' ರಹಮತ್ ತರೀಕೆರೆಯವರು ಅಂಡಮಾನಿನ ಬಣ್ಣಬಣ್ಣದ ಮೀನುಗಳ ಕುರಿತು ಹೇಳಿದ ಈ ಮಾತಿನ ಹಿನ್ನೆಲೆಯನ್ನು ಬರೆಯಿರಿ.

**20.** 'ಹಳತಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ' ಎಂದು ಋತುರಾಜನನ್ನು ಆಮಂತ್ರಿಸುವ 'ಸುಗ್ಗಿಬರುತಿದೆ' ಕವನದಲ್ಲಿ ಮೂಡಿಬಂದಿರುವ ಪ್ರಕೃತಿ ಸೌಂದರ್ಯವನ್ನು ವಿವರಿಸಿರಿ.

**21.** ಕೆಳಗೆ ಕೊಟ್ಟಿರುವ ಕವನದ ಆಶಯವನ್ನು ಬರೆಯಿರಿ.

ಕರುಣೆಯ ಬೆಳಕು ಎಂದನು ಬುದ್ಧ
ಕರುಣೆಯಿಲ್ಲದ ಜಗದಂತ್ಯವು ಸಿದ್ಧ
ಎಷ್ಟೋ ನಾಗರಿಕತೆಗಳ ಕತೆಗಳ
ಎಷ್ಟೋ ರಾಜ್ಯದ ರಾಜರ ಚಿತೆಗಳ
ಕಂಡಿತು ಇತಿಹಾಸದ ಕಣ್ಣು
ಕೊಂಡಿತು ನಾವೀ ನಡೆಯುವ ಮಣ್ಣು
ಮನುಷ್ಯ ಮನುಷ್ಯನ ನಡುವಿನ ಯುದ್ಧ
ಏನ ಗೆಲ್ಲಲು ಯಾರ ವಿರುದ್ಧ
ಗೆದ್ದವರಾರು ಗೆಲ್ಲಲೆ ಇಲ್ಲ
ಇದ್ದವರೆಂದೂ ಇರುವುದೆ ಇಲ್ಲ
ಎಲ್ಲಿ ನಿನ್ನೆಯ ವೀರಾಧಿವೀರರು
ಎಲ್ಲಿ ಅನಾದಿಯ ದೈವ ದೇವರು
ಎಲ್ಲ ಮಾಯೆಗಳ ಮೀರಿ ನಿಂತು
ಸಲ್ಲಬೇಕು ಜೀವದ ತಂತು

**22.** 'ಕೋಪದಿಂದ ವ್ಯಕ್ತಿ ತನ್ನ ಹಾಗೂ ಇತರರ ನಾಶಕ್ಕೆ ಕಾರಣನಾಗುತ್ತಾನೆ' – ನೀವು ಓದಿದ ಬಸವಣ್ಣನವರ ವಚನವನ್ನು ಹಿನ್ನೆಲೆಯಾಗಿರಿಸಿಕೊಂಡು ಆ ಕುರಿತು ಕಿರುಟಿಪ್ಪಣಿಯೊಂದನ್ನು ಬರೆಯಿರಿ.

**23.** ಮೊಸಳೆ ಬಾಯ್ದೆರೆದು ಸಕಲ ಜೀವಚರಗಳನ್ನು ತನ್ನೊಳಗೆ ಸಮಾಧಿಮಾಡಿಕೊಂಡ ಸುನಾಮಿಯ ಭೀಕರತೆ 'ಸುನಾಮಿಯ ಹಾಡು' ಕವನದಲ್ಲಿ ಹೇಗೆ ಮೂಡಿಬಂದಿದೆ? ವಿಶದಪಡಿಸಿರಿ.

**24.** ಅಭಯರುಚಿ ಮತ್ತು ಅಭಯಮತಿಯರನ್ನು ಮಾರಿದತ್ತನು 'ಧೀರರಕಟಕುಮಾರರ್' ಎಂದು ಪ್ರಶಂಸಿಸಲು ಕಾರಣವೇನು? ಪಾಠಭಾಗದಲ್ಲಿ ಬರುವ ಸನ್ನಿವೇಶದೊಂದಿಗೆ ವಿಶದವಾಗಿ ಬರೆಯಿರಿ.

**25.** ದುಷ್ಟಬುದ್ಧಿಯು ಮಾಡಿದ ಮಿತ್ರದ್ರೋಹ ಮತ್ತು ಅದಕ್ಕೆ ಲಭಿಸಿದ ಪ್ರತಿಫಲವನ್ನು 'ವಟವೃಕ್ಷಮೇ ಸಾಕ್ಷಿ' ಪಾಠದ ಆಧಾರದಲ್ಲಿ ಸಂಗ್ರಹಿಸಿ ಬರೆಯಿರಿ.

**26.** 'ಎಲಿಗ್ಹೋಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಟಾನ' ಹುಗ್ಗಿ ಕಥೆಯಲ್ಲಿ ಬರುವ ಈ ಮಾತಿನಲ್ಲಿ ಬಾಲಕಾರ್ಮಿಕ ವ್ಯವಸ್ಥೆಯ ಸೂಚನೆಯಿದೆ. ಸಮಾಜದಲ್ಲಿ ಕಾಣುವ ಈ ಸಮಸ್ಯೆಯ ಕುರಿತು ಓದುಗರ ಓಲೆ ವಿಭಾಗದಲ್ಲಿ ಪ್ರಕಟಿಸಲು ಕಿರುಲೇಖನವೊಂದನ್ನು ತಯಾರಿಸಿರಿ.

**27 ರಿಂದ 29 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡನ್ನು ಒಂದೂವರೆ ಪುಟಕ್ಕೆ ಮೀರದಂತೆ ಉತ್ತರಿಸಿರಿ.**
**(2 × 8 = 16)**

**27.** 'ಪ್ರಜೆಗಳ ಹಿತಕ್ಕೆಂದು ರಾಜ ಮತ್ತು ಬಕ ಇವರೊಳಗೆ ನಡೆದ ಒಪ್ಪಂದವು ಏಕಚಕ್ರನಗರದ ಜನರನ್ನು ಮತ್ತಷ್ಟು ಸಂಕಷ್ಟಕ್ಕೆ ಒಳಪಡಿಸಿತು' ಈ ಹೇಳಿಕೆಯನ್ನು ಸಮರ್ಥಿಸಿ ಲೇಖನವೊಂದನ್ನು ಸಿದ್ಧಪಡಿಸಿರಿ.

**28.** ಭೇದತಂತ್ರವನ್ನುಪಯೋಗಿಸಿ ಕರ್ಣನನ್ನು ಪಾಂಡವರ ಪಕ್ಷಕ್ಕೆ ಸೇರಿಸಲು ಕೃಷ್ಣನು ಮಾಡುವ ಪ್ರಯತ್ನವನ್ನು 'ನಿನ್ನಯ ವೀರರೈವರ ನೋಯಿಸೆನು' ಕಾವ್ಯಭಾಗದ ಆಧಾರದಲ್ಲಿ ವಿವರಿಸಿ ಬರೆಯಿರಿ.

**29.** ಕಿನ್ಯಾಗ್ರಾಮದ ಜನರು ಅನುಭವಿಸಿದ ಜಲಕ್ಷಾಮದ ಭೀಕರತೆಯನ್ನು 'ಒಸರು' ಕಥೆಯಲ್ಲಿ ಓದಿರುವಿರಿ. 'ಜಲಕ್ಷಾಮಕ್ಕೆ ಕಾರಣ ಮತ್ತು ಪರಿಹಾರ' ಎಂಬ ವಿಷಯದಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಅಗತ್ಯವಾದ ಪ್ರಬಂಧವೊಂದನ್ನು ಪಾಠಭಾಗದ ಮಾಹಿತಿಗಳನ್ನು ಬಳಸಿಕೊಂಡು ಸಿದ್ಧಪಡಿಸಿರಿ.